





ರಾಜಸ್ತಾನದ ಜೋಧಪುರದಲ್ಲಿರುವ ಮೆಹರಾನ್‌ಘಡ್ ಕೋಟೆ ಭಾರತದಲ್ಲೇ ಅತಿ ದೊಡ್ಡದಾದ ಕೋಟೆಗಳಲ್ಲಿ ಒಂದು. ಪಟ್ಟಣದ ಹೊರವಲಯದಲ್ಲಿ ಸುಮಾರು 410 ಅಡಿ ಎತ್ತರದಲ್ಲಿರುವ ಈ ಕೋಟೆ ಅತ್ಯುತ್ತಮ ವಾಸ್ತುಶೈಲಿಯನ್ನು ಹೊಂದಿದೆ. 1460ರಲ್ಲಿ ರಾವ್ ಜೋಧಾ ಈ ಕೋಟೆಯನ್ನು ಕಟ್ಟಿಸಿದ.

ರಾಠೋಡ್ ವಂಶದ ಹದಿನೈದನೆಯ ಅರಸನಾದ ರಾವ್ ಜೋಧಾ ಸಿಂಹಾಸನವನ್ನೇರಿದ ಬಳಿಕ ತನ್ನ ರಾಜಧಾನಿಯನ್ನು ಸುರಕ್ಷಿತ ಸ್ಥಳಕ್ಕೆ ಬದಲಾಯಿಸಲು ನಿರ್ಧರಿಸಿದ. ಅದಾಗಲೇ ಸಾವಿರ ವರ್ಷಗಳಷ್ಟು ಹಳೆಯದಾದ ಮಾಂಡೋರ್ ಕೋಟೆ ಶಿಥಿಲವಾಗಿತ್ತಲ್ಲದೇ ರಾಜ್ಯದ ರಕ್ಷಣೆಯ ದೃಷ್ಟಿಯಿಂದ ಸುರಕ್ಷಿತವಲ್ಲ ಎಂದು ಭಾವಿಸಿದ ಆತ, ದಿವಾನ್ ರಾವ್‌ನಾರಾ ಸಹಾಯದೊಂದಿಗೆ 1459 ಮಾರ್ಚ್ 12 ರಂದು ಮಾಂಡೋರ್‌ನಿಂದ ದಕ್ಷಿಣ ದಿಕ್ಕಿನಲ್ಲಿ 9 ಕಿಲೋಮೀಟರ್ ಎತ್ತರದ ಕಲ್ಲಿನ ಗುಡ್ಡದ ಮೇಲೆ ಹೊಸ ಕೋಟೆಯನ್ನು ಕಟ್ಟಲು ಆರಂಭಿಸಿದ.

ಈ ಗುಡ್ಡ ಆಗ 'ಭಾಕುರ್ಚೀರಿಯ' ಅಂದರೆ ಪಕ್ಷಿಗಳ ಪರ್ವತ ಎಂದೇ ಪ್ರಸಿದ್ಧವಾಗಿತ್ತು. ಚೀರಿಯಾನಾಥ್ ಜೀ ಎಂಬ ಸಂತ ಅಲ್ಲಿ ವಾಸವಿದ್ದನಲ್ಲದೇ ಅವನನ್ನು ಮತ್ತು ಅವನ ಅನೇಕ ಅನುಯಾಯಿಗಳನ್ನು ಅಲ್ಲಿಂದ ಒಕ್ಕಲೆಬ್ಬಿಸುವ ಪ್ರಯತ್ನ ನಡೆಯಿತು. ಪ್ರಭಾವಶಾಲಿಯಾದ ಸನ್ಯಾಸಿನಿ ಶ್ರೀ ಕರ್ಣಿಮಾತಾ ದೇವಿಯ ಸಹಾಯ ಪಡೆದುಕೊಂಡು ಚೀರಿಯಾನಾಥ್ ಜೀ, ಮತ್ತು ಅನುಯಾಯಿಗಳನ್ನು ಅಲ್ಲಿಂದ ಹೊರಹಾಕಲಾಯಿತು.

ಹೀಗೆ ನಿರ್ಮಾಣಗೊಂಡ ಕೋಟೆ 1638 ರಿಂದ 1678ರ ಅವಧಿಯಲ್ಲಿ ರಾಜಾ ಜಸವಂತ್ ಸಿಂಗ್ ಮಾರ್ವಾರ್ ಆಡಳಿತದ ಕಾಲದಲ್ಲಿ ಈಗಿರುವ ಸ್ವರೂಪ ಪಡೆದುಕೊಂಡಿತು. ಮೂಲದಲ್ಲಿ 'ಮಿಹಿರ್–ಘರ್' (ಸೂರ್ಯನ ಕೋಟೆ) ಆಗಿದ್ದ ಹೆಸರು ಕಾಲಾನುಕ್ರಮದಲ್ಲಿ ಮೆಹರಾನ್ ಘಡ್ ಎಂದು ಜನರ ಮಾತಿನಲ್ಲಿ ಬದಲಾಯಿತು.

118 ಅಡಿ ಎತ್ತರ, 69 ಅಡಿ ಅಗಲ ಇರುವ ಕೋಟೆ 7 ಪ್ರವೇಶ ದ್ವಾರಗಳನ್ನು ಹೊಂದಿದೆ. ಜೈಪುರ, ಉದಯಪುರ ಹಾಗೂ ಬಿಕಾನೇರ್‌ಗಳನ್ನು ವಶಪಡಿಸಿಕೊಂಡ ನೆನಪಿಗೆ ಮಹಾರಾಜ ಮಾನಸಿಂಗ್ ನಿರ್ಮಿಸಿದ 'ಜಯಪೋಲ್' (ವಿಜಯದ್ವಾರ) ಹಾಗೂ ಮೊಘಲರನ್ನು ಸೋಲಿಸಿದ ನೆನಪಿಗಾಗಿ ಮಹಾರಾಜಾ ಅಜಿತ್ ಸಿಂಗ್ ನಿರ್ಮಿಸಿದ 'ಫತೆಹ್ ಪೋಲ್' ಈ ಎರಡೂ ಪ್ರವೇಶ ದ್ವಾರಗಳು ಹೆಚ್ಚಿನ ಪ್ರಾಮುಖ್ಯತೆ ಪಡೆದಿವೆ.

ಈ ಕೋಟೆಯ ಒಳಾಂಗಣದಲ್ಲಿ ರಾಜಸ್ಥಾನೀ ಶೈಲಿಯ ಕುಸುರಿ ಕೆತ್ತನೆಗಳುಳ್ಳ ಹಲವು ಅರಮನೆಗಳಿವೆ. ಶೀಷ ಮಹಲ್, ಮೋತಿ ಮಹಲ್, ಫೂಲ್ ಮಹಲ್ ಅಲ್ಲದೇ ಹಲವು ಜನಾನಾ ಖಾನಾಗಳು ಇವೆ. ಎರಡು ಪುರಾತನ ದೇವಸ್ಥಾನಗಳಾದ ಚಾಮುಂಡ ಮಾತಾಜೀ ದೇವಸ್ಥಾನ ಮತ್ತು ರಾಥೋಡ್ ವಂಶಸ್ಥರ ಕುಲದೇವಿ ನಗ್ನೇಚೀಜೀ ದೇವಸ್ಥಾನ ಇದೇ ಪ್ರಾಂಗಣದಲ್ಲಿವೆ.

ಈ ಕೋಟೆಯೊಳಗೆ ವ್ಯವಸ್ಥಿತವಾದ ವಸ್ತು ಸಂಗ್ರಹಾಲಯವೊಂದಿದೆ. ಬಂಗಾರ ಮತ್ತು ಬೆಳ್ಳಿಯ ಹೊದಿಕೆಯಿಂದ ಆವೃತವಾದ ಎರಡು ವಿಭಾಗಗಳನ್ನು ಹೊಂದಿದ ಈ ಸಂಗ್ರಹಾಲಯದಲ್ಲಿ ಅಪೂರ್ವ ವಸ್ತುಗಳಿವೆ. ಮರದ ಕುರ್ಚಿ, ಯುದ್ಧಕ್ಕೆ ಬಳಸುವ ಖಡ್ಗ, ಮುತ್ತು ರತ್ನಗಳ ಕುಸುರಿ ಕೆಲಸದ ಅನೇಕ ವಸ್ತುಗಳು, ಮೊಘಲರ ಕಾಲದ ವಸ್ತುಗಳು, ಚಕ್ರವರ್ತಿ ಅಕ್ಬರ್ ಹಾಗೂ ತೈಮೂರ್ ದೊರೆಗಳು ಬಳಸುತ್ತಿದ್ದ ಖಡ್ಗಗಳು, ಮಾರ್ವಾರ್ ಪೇಂಟಿಂಗ್ಸ್‌ಗಳು, ರಾಜಸ್ತಾನದ ಹಲವು ಜಾತಿಗಳ ಜನ ಬಳಸುವ ವಿವಿಧ ಮುಂಡಾಸುಗಳ ಮಾದರಿಗಳು, ಹಳೆಯ ಕಾರುಗಳ ಸಂಗ್ರಹ– ಹೀಗೆ ಪ್ರವಾಸಿಗರನ್ನು ಆಕರ್ಷಿಸುವ ಎಲ್ಲವೂ ಇಲ್ಲಿವೆ. ಕೋಟೆಯ ಹೊರಭಾಗಕ್ಕೆ ಬಂದರೆ ರಾಜಸ್ತಾನಿ ಜನಪದ ಸಂಗೀತ, ನೃತ್ಯ ಸವಿಯಬಹುದು.